# ಟೆಂಪಲ್ ಆಭರಣ



ರೂಬಿಯೂ ಸೇರಿದಂತೆ ಅಮೂಲ್ಯ ರತ್ನಗಳಿಂದ ಕೂಡಿದ ಹರಳಿನಾಭರಣ ಟೆಂಪಲ್ ಆಭರಣ ಎಂದೇ ಖ್ಯಾತಿ. ಸಾಂಪ್ರದಾಯಿಕ ಒಡವೆಯನ್ನೇ ಹೋಲುವ ಟೆಂಪಲ್ ಆಭರಣ ದೈವತ್ವದ ಕಳೆಯನ್ನೂ ಕೊಡುತ್ತದೆ.

ಗಾಢಬಣ್ಣದ ರೇಷ್ಮೆ ಸೀರೆಗೆ ಕಾಂಟ್ರಾಸ್ಟ್ ಅಥವಾ ಮ್ಯಾಚಿಂಗ್ ಬಣ್ಣದ ರವಿಕೆ ತೊಟ್ಟು ಟೆಂಪಲ್ ಆಭರಣ ಧರಿಸಿದರೆ ಸಖತ್ ಲುಕ್! ಹರಳುಗಳಲ್ಲಿ ಅದರಲ್ಲೂ ಕಣ್ಮನ ಸೆಳೆಯುವ ಬಣ್ಣದ ರೂಬಿ ಒಡವೆ ತೊಟ್ಟರಂತೂ ನೋಟ ಆಕರ್ಷಕ.

ಇದೀಗ ಪಾರಂಪರಿಕ ಆಭರಣವೂ ಫ್ಯಾಷನ್‌ನ ಹಾದಿ ಹಿಡಿದಿದೆ. ಹುಡುಗಿ ಚಿಕ್ಕವಳಿರುವಾಗಲೇ ಅಲಂಕಾರಕ್ಕೆ, ಒಡವೆ ವಿನ್ಯಾಸಗಳ ಬಗ್ಗೆ ಒಲವು ಬೆಳೆಸಿಕೊಂಡಿರುತ್ತಾಳೆ. ಇದು ಆಕೆಗೆ ಅಜ್ಜಿ– ಅಮ್ಮಂದಿರ ಬಳುವಳಿಯೂ ಆಗಿರಬಹುದು. ಚಂದದ ಕುಸುರಿ ಇರುವ ಆಭರಣವನ್ನು ಕೊಂಡುಕೊಳ್ಳಲು ತವಕಪಡುವ ಮಹಿಳೆಗೆ ಈ ಹೂಡಿಕೆ ಹಿಂದೆ ಚಿನ್ನ ಆಪತ್ಕಾಲದಲ್ಲಿ ನೆರವಾಗುತ್ತದೆ ಎಂಬ ಜಾಗೃತ ಮನಸ್ಸೂ ಇರಬೇಕು.

ಮನಮೋಹಕವಾದ ಪಾರಂಪರಿಕ ಆಭರಣ ಫ್ಯಾಷನ್ ಆಗಿ ಬಂದ ಲಾಗಾಯ್ತಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳುಕು ಹಾಕಿಕೊಂಡು ಮತ್ತಷ್ಟು ಆಕರ್ಷಕವಾಗಿ ಗ್ರಾಹಕರನ್ನು ಸೆಳೆಯುತ್ತಿವೆ. ಜೊತೆಗೆ ಪ್ರಾಚೀನ ಆಭರಣಗಳು, ವಧುವಿನ ಅಲಂಕಾರ ಸಂಗ್ರಹ, ನಿಜಾಮರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ.. ಹೀಗೆ ಆಭರಣಗಳ ತರಾವರಿ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ರಾಯಭಾರ ನಡೆಸುತ್ತಿದೆ.





ಬಣ್ಣ ಬಣ್ಣದ ಹರಳುಗಳನ್ನು ಅಳವಡಿಸಿದ ಆಭರಣ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಆಭರಣ ಹೇಗೆ ವಿನ್ಯಾಸಗೊಳಿಸಿದರೆ ಚಂದ ಕಾಣಬಹುದು ಎಂಬುದನ್ನು ಒಡವೆ ಧರಿಸುವ ಮುನ್ನ ತಿಳಿದಿರಬೇಕು. ಬದುಕು ಕಲರ್‌ಫುಲ್ ಆಗಿರಬೇಕು. ಜೊತೆಗೆ ನಾವು ಧರಿಸುವ ಆಭರಣ ಕೂಡ.

ಮಲ್ಟಿ ಕಲರ್ ಬೀಡ್ಸ್, ಸ್ಟೋನ್‌ಗಳು ಸೆಮಿ ಪ್ರೆಷಿಯಸ್ ಬರುತ್ತವೆ. ಬಹಳ ಕಡಿಮೆ ದರದಲ್ಲಿ, ಅದೇ ರೀತಿ ಹೊಳಪಿರುವ ಚೆಂದದ ಹರಳು ಒಡವೆ ಬೇಕು ಎನ್ನುವವರು ನವರತ್ನದ ಮೊರೆ ಹೋಗಬಹುದು. ಶೈನಿಂಗ್, ಕೆತ್ತನೆ, ಭಾರ, ಸೈಜ್, ಬಣ್ಣ ಹೊಂದಿಕೊಂಡು ಇದರ ಬೆಲೆ ನಿರ್ಧಾರವಾಗುತ್ತದೆ.

ನೂಲಿನಲ್ಲಿ ಕೂಡ ಬೀಡ್ಸ್, ಹರಳುಗಳ ಪೆಂಡೆಂಟ್‌ಗಳನ್ನು ಹೆಣೆದು ಧರಿಸುತ್ತಾರೆ. ಮಲ್ಟಿ ಕಲರ್ ಎಂದಾಗ ಡಾರ್ಕ್ ಹಾಗೂ ಲೈಟ್ ಎರಡೂ ಶೇಡ್‌ಗಳಲ್ಲಿ ಹರಳುಗಳನ್ನು ಅಳವಡಿಸಬಹುದು. ದೊಡ್ಡ, ಸಣ್ಣ ಸೈಜ್ ಎಲ್ಲಾ ಒಂದೇ ರೀತಿ ಸೈಜ್… ಹೀಗೆ ಬೇರೆ ಬೇರೆ ರೀತಿ ಸಣ್ಣ ಹರಳಿನಿಂದ ದೊಡ್ಡ ಹರಳಿನ ಸಾಲುಗಳ, ವಿಧ ವಿಧ ರೀತಿಯಲ್ಲಿ ಪೋಣಿಸಿದ ಆಭರಣ ಧರಿಸಬಹುದು.

ಹರಳಿಗೆ ರಂಧ್ರ ತೆಗೆದು ಗಾಂಚು ಸರಿಗೆಯಲ್ಲಿ ಪೋಣಿಸಿ ಹ್ಯಾಂಗಿಂಗ್ ರೂಪದಲ್ಲಿ ಧರಿಸಬಹುದು. ಇದಕ್ಕೆ ಚಿನ್ನದ ಪ್ರಮಾಣ ಕಡಿಮೆ ಸಾಕು. ಇಷ್ಟವಾದ ಬಣ್ಣದ ಹರಳುಗಳನ್ನು ಸ್ವಲ್ಪ ದೊಡ್ಡ ಸೈಜ್‌ನಲ್ಲೂ ಇರುವಂತೆ ಆಯ್ಕೆ ಮಾಡಿ ಧರಿಸಬಹುದು. ಒಟ್ಟಿನಲ್ಲಿ ಬಣ್ಣ ಬಣ್ಣದ ರಿಂಗ್, ಬಣ್ಣ ಬಣ್ಣದ ಆಭರಣ ಚಂದ.

### ಹರಳಿನಾಭರಣಗಳ ಉಪಯೋಗ

- ಯಾವುದೇ ಡ್ರೆಸ್ಸಿಗೆ ಹಾಕಬಹುದು.
- ನವರತ್ನದ ಆಭರಣದಂತೆ ಕಾಣುತ್ತದೆ.
- ವಯಸ್ಸಿನ ಮಿತಿ, ನಿರ್ಬಂಧ ಇಲ್ಲದೆ ಧರಿಸಬಹುದು.
- ಅವರವರ ಆಸಕ್ತಿಯ, ಆಕಾರದ ಆಭರಣ ಬಳಸಬಹುದು.
- ತುಂಬಾ ಫ್ಯಾಷನಬಲ್ ಆಗಿರುತ್ತದೆ.
- ಕಿವಿಯೋಲೆಯನ್ನು ಚೂಡಿದಾರ, ಹಾಫ್ ಸೀರೆ ಯಾವುದೇ ಉಡುಗೆ ಮೇಲೆಯೂ ಧರಿಸಬಹುದು. ಎಲ್ಲರೂ ಒಡವೆಗಳನ್ನು ಬ್ಯಾಂಕ್ ಲಾಕರ್‌ನಲ್ಲಿ ಇಡುವುದು ವಾಡಿಕೆ. ಈ ಒಂದು ಆಭರಣ ಎಲ್ಲ ಉಡುಪುಗಳಿಗೂ ಸೂಕ್ತವಾಗುವುದರಿಂದ ಇದನ್ನು ಮನೆಯಲ್ಲಿ ಇಟ್ಟುಕೊಳ್ಳಬಹುದು.
- ಮಲ್ಟಿ ಕಲರ್ ಸ್ಟೋನ್ ನೆಕ್ಲೇಸ್ ಆಗಿದ್ದರೆ ಇದನ್ನು ದೊಡ್ಡ ಸಮಾರಂಭಗಳಿಗೆ ಮ್ಯಾಚಿಂಗ್‌ನ ತಾಪತ್ರಯ ಇಲ್ಲದೆ ಯಾವ ಉಡುಪಿಗೆ ಬೇಕಾದರೂ ಧರಿಸಬಹುದು.
- ಹ್ಯಾಂಗಿಂಗ್ ಕೂಡ ಮಲ್ಟಿ ಕಲರ್ ಬೀಡ್ಸ್, ಹರಳು ಇದ್ದಾಗ ಬಹಳ ಸುಂದರವಾಗಿರುತ್ತದೆ.
- ಹರಳುಗಳನ್ನು ಇಷ್ಟಪಡುವವರಿಗೆ ಭದ್ರವಾದ ಹಲವಾರು ಸೆಟ್ಟಿಂಗ್‌ಗಳು ಈಗ ಬಳಕೆಯಲ್ಲಿವೆ.
- ಮಲ್ಟಿಕಲರ್ ಆಭರಣ ಬಹಳ ಅದ್ಭುತ ನೋಟ ನೀಡುತ್ತದೆ. ಧರಿಸಿದಾಗಲೇ ಅದರ ಅನುಭವವಾಗುವುದು.
- ಬಗೆ ಬಗೆ ವೈವಿಧ್ಯಮಯ ಆಭರಣ ತೊಡಬೇಕು ಎನ್ನುವವರಿಗೆ ಇದು ಉತ್ತಮ ಆಯ್ಕೆ.